ಕೆಲಸವನ್ನು ಮಾಡಿದವರು ನಮ್ಮ ಗುರುಗಳಾದ ಬಿಪಿನ್ ಸಿಂಗ್. ವೇದಿಕೆಗಳಿಗೆ ಹೊಂದುವಂತಹ ಏಕವ್ಯಕ್ತಿ ಪ್ರದರ್ಶನಗಳು, ರಾಧಾಕೃಷ್ಣರ ಪ್ರಸ್ತುತಿ, ಗೋಪಿಕಾ ರಾಸಲೀಲೆಗಳ ಹಲವಾರು ಪರಿಕಲ್ಪನೆಗಳನ್ನು ಅವರು ರೂಪಿಸಿದರು. ಅವರ ಓದಿನ ವಿಸ್ತಾರ, ಶಾಸ್ತ್ರ ಜ್ಞಾನ, ವೈಷ್ಣವ, ಶೈವ ಮತ್ತು ಶಾಕ್ತ ಸಂಪ್ರದಾಯಗಳ ಅರಿವಿನ ದೆಸೆಯಿಂದಾಗಿ ನಾವು ಎಂಟು ತಾಸುಗಳ ಮಣಿಪುರಿ ನೃತ್ಯವನ್ನು ಒಂದೆರಡು ತಾಸುಗಳ ವೇದಿಕೆಯ ಪ್ರದರ್ಶನವನ್ನಾಗಿ ಪರಿವರ್ತಿಸುವುದು ಸಾಧ್ಯವಾಯಿತು. ಅಂತಹ ಬದಲಾವಣೆಗಳ ಕುರಿತು ಪ್ರಶ್ನೆಗಳೆದ್ದಾಗ ನಾವು ಸೋದರಿಯರು ಮತ್ತು ಗುರುಗಳು ಸಮರ್ಥವಾದ, ಸಮ್ಮತವಾದ ಸಮಜಾಯಿಷಿಗಳನ್ನು ಕೊಡಬಲ್ಲವಾಗಿದ್ದೆವು. ಈ ಬದಲಾವಣೆಯನ್ನು ನಾವು ಮಾಡಿದ್ದೇವೆ ಎಂಬ ಹಮ್ಮು ಗುರುಗಳಿಗಿರಲಿಲ್ಲ. ನೃತ್ಯವನ್ನು ಹೆಚ್ಚಿನ ಜನರಿಗೆ ತಲುಪಿಸಬೇಕೆಂಬುದಷ್ಟೇ ಅವರ ಗುರಿಯಾಗಿತ್ತು. ಆದ್ದರಿಂದ ಈ ಎಲ್ಲ ಬದಲಾವಣೆಯ ಯಶಸ್ಸಿನ ಹಿಂದಿರುವ ಶಕ್ತಿಯೇನಿದ್ದರೂ ಅವರ ವಿನಯವೇ ಆಗಿತ್ತು.

ಈಗ ಎರಡು ಗಂಟೆಗಳ ಮಣಿಪುರಿ ನೃತ್ಯ ಪ್ರದರ್ಶನದಲ್ಲಿ ನಾವು, 20 ನಿಮಿಷಗಳ ಚಿಕ್ಕ ರಾಸಲೀಲೆ (8 ಗಂಟೆಯಷ್ಟು ದೀರ್ಘ ಪ್ರಸ್ತುತಿಯನ್ನು 20 ನಿಮಿಷಕ್ಕೆ ಇಳಿಸಲಾಗಿದೆ) ತಾಳ, ಲಾಸ್ಯ ಮತ್ತು ತಾಂಡವ ನೃತ್ಯಗಳನ್ನು ಪ್ರಸ್ತುತಪಡಿಸುತ್ತೇವೆ. ಮಣಿಪುರಿಯು ತನ್ನದೇ ಆದ ತಾಳ ವ್ಯವಸ್ಥೆಯನ್ನು ಹೊಂದಿದ್ದು, ನಾಲ್ಕರಿಂದ 68 ಬೀಟ್ಸ್‌ವರೆಗಿನ ತಾಳಗಳಿವೆ. ತಾಳಗಳು, ಪ್ರಬಂಧಗಳು (ಸಂಗೀತ ರಚನೆ) ಇವೆ. ಒಂದು ಪ್ರಬಂಧದಲ್ಲಿ ಪದ, ಪಾಠ, ಸ್ವರ, ತಿಣಕ, ವಿರುದ (ಕವಿಯ ಹೆಸರು ಅಥವಾ ನಾಯಕ ನಾಯಿಕೆಯ ಶ್ಲಾಘನಾ ಪದ್ಯ) ಮತ್ತು ತಾಳ – ಹೀಗೆ ಆರು ಅಂಗಗಳಿವೆ.

**◆ ಇಡೀ ರಾತ್ರಿ ನಡೆಯುವ ಪ್ರದರ್ಶನವೊಂದನ್ನು ಕೆಲವು ಗಂಟೆಗಳಿಗೆ ಇಳಿಸಿದ್ದರಿಂದಾಗಿ, ನೃತ್ಯಪ್ರಕಾರವೊಂದರ ವಿಕಾಸಕ್ಕೆ ತೊಡಕಾಗಲಿಲ್ಲವೆ?**

ಇಲ್ಲ. ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಮಣಿಪುರಿ ನೃತ್ಯಗಳ ಕಲಿಕೆಯ ಶಿಸ್ತುಬದ್ಧತೆ ಕಡಿಮೆಯಾಗುತ್ತಾ ಬಂದಿತ್ತು. ಯಾಕೆಂದರೆ, 20ನೇ ಶತಮಾನದಲ್ಲಿ ಸಂಸ್ಕೃತದ ಆಕರ ಕೃತಿಗಳನ್ನು ಅಧ್ಯಯನ ಮಾಡುವ, ಸಂಪ್ರದಾಯವನ್ನು ಅನುಸರಿಸುವವರ ಸಂಖ್ಯೆ ಕಡಿಮೆಯಾಯಿತು. ಪ್ರದರ್ಶನಕ್ಕೆ ಬೇಕಾದಷ್ಟೇ ಕಲಿಯುವ ರೂಢಿ ಬಂದುದರಿಂದ ಹಿರಿಯ ಗುರುಗಳ ಜ್ಞಾನವು ಮುಂದಿನ ತಲೆಮಾರಿಗೆ ವರ್ಗಾವಣೆ ಆಗದೇ ಅಲ್ಲಲ್ಲೇ ಉಳಿದುಹೋಗುತ್ತಿತ್ತು. ಮೌಖಿಕವಾಗಿ ನಡೆದು ಬಂದ ಸಂಪ್ರದಾಯವು ನಶಿಸುತ್ತಾ ಬಂದಿತ್ತು. ಗುರು–ಶಿಷ್ಯ ಪರಂಪರೆಯ ಶಿಕ್ಷಣ ಪ್ರಕಾರದಲ್ಲಿ ಉಳಿದುಕೊಂಡಿದ್ದ ನೃತ್ಯವಿಶೇಷಗಳು ಎಲ್ಲರಿಗೂ ದೊರೆಯುವಂತೆ ಮಾಡಬೇಕು ಎಂಬುದು ಗುರುಗಳ ಆಶಯವಾಗಿತ್ತು. ಹಾಗೆ ಮಾಡಿದಾಗ ಮಾತ್ರ ಕಲಾಪ್ರಕಾರವು ವಿಕಾಸ ಹೊಂದುತ್ತ ಸಾಗುತ್ತದೆ ಅಲ್ಲವೇ. 1956ರ ಸುಮಾರಿಗೆ ನಾವು ದಾಖಲೀಕರಣ ಪ್ರಕ್ರಿಯೆಯಲ್ಲಿ ತೊಡಗಿದ್ದೆವು. ರಾಸಲೀಲೆ, ನೃತ್ಯ ರೂಪಕ ಮತ್ತು ಸಂಕೀರ್ತನೆಗಳ ಸಂಗ್ರಹ, ಬರಹ ಮತ್ತು ದಾಖಲೀಕರಣಗಳನ್ನು ನಿರಂತರವಾಗಿ ಮಾಡಿದೆವು. ಸಂಕೀರ್ತನೆಗಳಂತೂ ಬಂಗಾಳದಲ್ಲಿ ಬಹಳವೇ ವಿಕಾಸ ಹೊಂದಿತ್ತು. ಪರಿಪೂರ್ಣ ನೃತ್ಯಪ್ರಕಾರವಾಗಿ ಬೆಳೆದಿತ್ತು. ಹಲವಾರು ಗುರುಗಳ ಬಳಿ ನಾವು ನೃತ್ಯದ ಶೈಲಿ, ಅದರ ಹಿಂದೆ ಅಡಗಿರುವ ಶಾಸ್ತ್ರಜ್ಞಾನ ಮತ್ತು ಹಿನ್ನೆಲೆಗಳನ್ನು ಕೇಳಿ ತಿಳಿದುಕೊಂಡು ದಾಖಲೀಕರಣ ಮಾಡಿದೆವು. 130 ಗಂಟೆಗಳಿಗೂ ಹೆಚ್ಚು ಅವಧಿಯ ಮೌಖಿಕ ಸಾಹಿತ್ಯವನ್ನು ದಾಖಲಿಸಿದೆವು. ಅವೆಲ್ಲ ಈಗಲೂ ನನ್ನ ಬಳಿಯಿವೆ. ಅಂದಿನ ಕಾಲದ ಪ್ರಸಿದ್ಧ ಗುರುಗಳು ಹೇಳಿದ ಅಪರೂಪದ ಸಾಹಿತ್ಯವು ಅದರಲ್ಲಿ ದಾಖಲಾಗಿವೆ. ಜನಮಾನಸದಿಂದ ಮರೆಯಾಗುತ್ತಿದ್ದ ಅನೇಕ ಶೈಲಿ, ಸಾಹಿತ್ಯ, ನೃತ್ಯದ ವಿಚಾರಗಳು ಈ ದಾಖಲೆಯಲ್ಲಿವೆ.

**◆ ನೀವು ಗುಜರಾತಿನವರು. ಇತರ ನೃತ್ಯಪ್ರಕಾರಗಳನ್ನೂ ಬಾಲ್ಯದಲ್ಲಿ ಕಲಿತವರು. ಮಣಿಪುರಿ ನೃತ್ಯವನ್ನೇ ಇಷ್ಟೊಂದು ಹಚ್ಚಿಕೊಂಡು ಬದುಕನ್ನೇ ಸಮರ್ಪಿಸುವಷ್ಟು ಆಕರ್ಷಿತರಾಗಲು ಕಾರಣವೇನು?**

ಇಂಥದ್ದೇ ಕಾರಣ ಎಂದು ಹೇಳುವುದಕ್ಕಾಗದು. ಆದರೆ, ಮಣಿಪುರಿ ನೃತ್ಯದ ಸೌಮ್ಯ ಸ್ವಭಾವವೇ ನನ್ನನ್ನು